ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/14620/20-21

ದಿನಾಂಕ : 17 DEC 2020

## ಸುತ್ತೋಲೆ

**ವಿಷಯ:-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮಗಳನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ರೂ.50.00 ಲಕ್ಷಗಳವರೆಗಿನ ಕಾಮಗಾರಿಗಳಲ್ಲಿ ಮೀಸಲಾತಿ ನೀಡುವ ಬಗ್ಗೆ.

**ಉಲ್ಲೇಖ:-**
1. ಅಧಿಸೂಚನೆ ಸಂಖ್ಯೆ ಸಂವ್ಯಶಾಇ 22 ಶಾಸನ 2016 ದಿನಾಂಕ 29/06/2017 ಹಾಗೂ ದಿನಾಂಕ 17/07/2017.
2. ಕವಿಪ್ರನಿನಿ/ಬಿ19/84/94-95 ದಿನಾಂಕ 23/08/2017.
3. ಅಧಿಸೂಚನೆ ಸಂಖ್ಯೆ ಆಇ876 ವೆಚ್ಚ-12/2017 ದಿನಾಂಕ 15/09/2017.
4. ಸರ್ಕಾರದ ಸುತ್ತೋಲೆ ಸಂಖ್ಯೆ ಆಇ876 (ಪಿ-1) ವೆಚ್ಚ-12/17 ದಿನಾಂಕ 12/10/2017.
5. ಕವಿಪ್ರನಿನಿ/ಬಿ9/39331/16-17 ದಿನಾಂಕ 04/12/2017.
6. ಇಂಧನ ಇಲಾಖೆಯ ಪತ್ರ ಸಂಖ್ಯೆ ಎನರ್ಜಿ219/ಸಮನ್ವಯ/2019 ದಿನಾಂಕ 13/02/2020.
7. ಕವಿಪ್ರನಿನಿ/ಬಿ8/401//19-20 ದಿನಾಂಕ 05/03/2020.
8. ಇಂಧನ ಇಲಾಖೆಯ ಪತ್ರ ಸಂಖ್ಯೆ ಎನರ್ಜಿ793/ವಿಎಸ್‌ಸಿ/2020-ಇಎಂಸಿ ದಿನಾಂಕ 29/10/2020.

<><><><><>

**ಪೀಠಿಕೆ:**

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಟೆಂಡರ್ ಕಾಮಗಾರಿಗಳಲ್ಲಿ ಮೀಸಲಾತಿ ನೀಡುವಂತೆ ಉಲ್ಲೇಖ (1) ರ ಅಧಿಸೂಚನೆಗಳಲ್ಲಿ ತಿಳಿಸಲಾಗಿದ್ದು, ಉಲ್ಲೇಖ (2) ಪತ್ರದಲ್ಲಿ ಎಲ್ಲಾ ವಲಯಗಳಿಗೂ ಸದರಿ ಅಧಿಸೂಚನೆಯನ್ನು ಕಳುಹಿಸಲಾಗಿದ್ದು, ನಿಗಮದ ಅಂತರ್ಜಾಲದಲ್ಲಿ ಸಹ ಪ್ರಕಟಿಸಲಾಗಿದೆ.

2. ಉಲ್ಲೇಖ (3) ರಲ್ಲಿನ ಸರ್ಕಾರದ ಅಧಿಸೂಚನೆ ದಿನಾಂಕ 15/09/2017 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು 2017 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ನಿಯಮ 27 (A) ರಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಟೆಂಡರ್‌ದಾರರಿಗೆ ರೂ.50.00 ಲಕ್ಷಗಳ ಮಿತಿಯೊಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳಲ್ಲಿ ಅಧ್ಯತೆ ನೀಡುವ ನಿಯಮ ಹೊರಡಿಸಲಾಗಿದೆ. ಸದರಿ ನಿಯಮಗಳನುಸಾರ ಸಂಬಂಧಪಟ್ಟ ಟೆಂಡರ್ ಅಹ್ವಾನಿಸುವ ಪ್ರಾಧಿಕಾರವು ಕಾಮಗಾರಿಗಳ ಆಯ್ಕೆಯನ್ನು Randomization ಪದ್ಧತಿ ಮೂಲಕ ಮಾಡಿಕೊಳ್ಳಲು ತಿಳಿಸಲಾಗಿದೆ.

3. ಉಲ್ಲೇಖ (4) ರ ಸರ್ಕಾರದ ದಿನಾಂಕ 12/10/2017 ರ ಸುತ್ತೋಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯು Randomization ಕೈಗೊಳ್ಳಲು ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ದಿನಾಂಕ 09/10/2017 ರಿಂದ e-Procurement Portal ನಲ್ಲಿ ಲಭ್ಯವಿದ್ದು, ಸದರಿ ತಂತ್ರಾಂಶವನ್ನು ಎಲ್ಲಾ ಇಲಾಖೆಗಳ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಕಡ್ಡಾಯವಾಗಿ ಉಪಯೋಗಿಸಿಕೊಳ್ಳತಕ್ಕದೆಂದು ಸೂಚಿಸಲಾಗಿದೆ. ಸದರಿ ಆದೇಶಗಳನ್ನು ನಿಗಮದ ಉಲ್ಲೇಖ (5) ರಲ್ಲಿನ ಸುತ್ತೋಲೆಯ ಮೂಲಕ ಅನುಸರಣೆಗಾಗಿ ಸೂಚಿಸಲಾಗಿದೆ.

4. ಉಲ್ಲೇಖ (6) ರ ಇಂಧನ ಇಲಾಖೆಯ ಪತ್ರದಲ್ಲಿ ಸರ್ಕಾರದಿಂದ ನಿಗದಿಪಡಿಸಿದ ಮಾದರಿ ಟೆಂಡರ್ ದಾಖಲೆಗಳನ್ನು ಕೆಟಿಪಿಪಿ ಕಾಯ್ದೆಯ 2 (ಡಿ) ರಡಿಯಲ್ಲಿ ವ್ಯಾಖ್ಯಾನಿಸಲಾದ ಎಲ್ಲಾ ಸಂಗ್ರಹಣಾ ಸಂಸ್ಥೆಗಳು ಬಳಕೆ ಮಾಡತಕ್ಕದೆಂದು ಹಾಗೂ ಅದರಲ್ಲಿನ ಎಲ್ಲಾ ಅಂಶಗಳು Electric Works ಸಂಗ್ರಹಣೆಯ ಸಂದರ್ಭಗಳಲ್ಲಿ ಅನ್ವಯವಾಗುತ್ತದೆಂದು ಹಾಗೂ ಅವುಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ನೀಡಲಾದ ತಿದ್ದುಪಡಿ, ಸುತ್ತೋಲೆ, ಆದೇಶಗಳಲ್ಲಿನ ಮಾರ್ಗಸೂಚಿಗಳ ಅನುಸಾರ ಸಂಗ್ರಹಣಾ ಸಂಸ್ಥೆಗಳು ಅನುಸರಿಸಬೇಕೆಂದು ತಿಳಿಸಲಾಗಿದೆ. ಸದರಿ ಪತ್ರದ ಪ್ರತಿಯನ್ನು ನಿಗಮದ ಎಲ್ಲಾ ವಲಯಗಳ ಮುಖ್ಯ ಇಂಜಿನಿಯರ್ (ವಿ) ಗಳಿಗೆ ಉಲ್ಲೇಖ (7) ರ ಪತ್ರದಲ್ಲಿ ಅನುಸರಣೆಗಾಗಿ ಕಳುಹಿಸಲಾಗಿದೆ.

5. ಉಲ್ಲೇಖ (8) ರಲ್ಲಿನ ಇಂಧನ ಇಲಾಖೆ ಪತ್ರದಲ್ಲಿ ಕೆಟಿಪಿಪಿ ಕಾಯ್ದೆಯ ಅವಕಾಶಗಳು ಮತ್ತು ಅದರಡಿ ರಚಿಸಲಾದ ನಿಯಮಗಳು ಕಾಯ್ದೆಯ ಕಲಂ 2 (ಡಿ) ರಡಿ ವ್ಯಾಖ್ಯಾನಿಸಲಾದ ಎಲ್ಲಾ ಸಂಸ್ಥೆಗಳಿಗೂ ಅನ್ವಯವಾಗುತ್ತದೆಯೆಂದು ತಿಳಿಸಲಾಗಿದೆ.

**ಆದೇಶ:**

ಉಲ್ಲೇಖದಲ್ಲಿನ ಸರ್ಕಾರದ ಅಧಿಸೂಚನೆ, ಸುತ್ತೋಲೆ ಹಾಗೂ ಪತ್ರಗಳಲ್ಲಿ ನಿರ್ದೇಶಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಟೆಂಡರ್‌ದಾರರಿಗೆ ರೂ.50.00 ಲಕ್ಷಗಳ ಮಿತಿಯೊಳಗಿನ ಎಲ್ಲಾ ನಿರ್ಮಾಣ ಕಾಮಗಾರಿಗಳ (ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ) ಟೆಂಡರ್‌ಗಳಲ್ಲಿ ಅಧ್ಯತೆ ನೀಡುವ ನಿಯಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

(ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

17/12/2020

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.